ನೀವು ಅಂದುಕೊಳ್ಳುವುದು ಸಹಜ. ನೀವು ಹಾಗೆ ಅಂದುಕೊಳ್ಳುವುದರಲ್ಲಿ ಯಾವುದೇ ಅತಿಶಯೋಕ್ತಿಯಾಗಲೀ, ಉತ್ಪ್ರೇಕ್ಷೆಯಾಗಲೀ ಇಲ್ಲ. ಅವರ ಜೀವನದಲ್ಲಿ ಆದ ಸ್ಥಿತ್ಯಂತರಕ್ಕೆ, ಪಲ್ಲಟಕ್ಕೆ ಕಾರಣವಾದ ಘಟನೆಗಳೇ ಅವರು ಈ ರೀತಿ ನಡೆದುಕೊಳ್ಳಲು ಕಾರಣ' ಎಂದು ಹೇಳಿ ನೀಳವಾದ ಉಸಿರುಬಿಟ್ಟಳು.

ಶಾರ್ವರಿಯ ಮಾತಿನಿಂದ ಈ ಅಜ್ಜ-ಮೊಮ್ಮಗಳ ಜೀವನದಲ್ಲಿ ಏನೋ ಘಟಿಸಿದೆ ಎಂದುಕೊಂಡ ವಿಶ್ವನಾಥಯ್ಯ 'ಏನು? ಅಂಥದ್ದು ಏನಾಯಿತು, ನಿಮ್ಮಿಬ್ಬರ ಜೀವನದಲ್ಲಿ' ಎಂದು ಕೇಳಿದರು.

'ಇಲ್ಲ, ಇಲ್ಲ. ನಮ್ಮಿಬ್ಬರ ಜೀವನದಲ್ಲಿ ಅಲ್ಲ. ಅಪ್ಪಯ್ಯನ, ಕೇವಲ ಅಪ್ಪಯ್ಯನ ಜೀವನದಲ್ಲಿ ನಡೆದ ಸ್ಥಿತ್ಯಂತರ ಇದಕ್ಕೆ ಕಾರಣ. ಇದೆಲ್ಲ ಶುರುವಾದದ್ದು ಈಗ್ಗೆ 20– 25 ವರ್ಷಗಳ ಹಿಂದೆ' ಎಂದು ಹೇಳಿ ಕ್ಷಣಕಾಲ ಆಕಾಶದ ಕಡೆ ನೋಡುತ್ತಾ ನಿಟ್ಟುಸಿರುಬಿಟ್ಟಳು ಶಾರ್ವರಿ.

ಮಾತನ್ನು ಮುಂದುವರಿಸಿ 'ಅಪ್ಪಯ್ಯನ ದೊಡ್ಡಮಗ ಇದ್ದಾರಲ್ಲ, ಅವರು ಅಮೆರಿಕದಲ್ಲಿ ಇದ್ದಾರೆ. ಅವರು ಅಮೆರಿಕಕ್ಕೆ ಹೋದದ್ದು ಓದಲೆಂದು. ಓದು ಮುಗಿಸಿ ವಾಪಸು ಬರುವುದಾಗಿ ಹೇಳಿಯೇ ಹೋಗಿದ್ದರು. ಆದರೆ ಆಗ ಅಪ್ಪಯ್ಯನಿಗೆ ಅಮೆರಿಕದಲ್ಲಿ ಓದಿದ ಮಗ ಮತ್ತೆ ವಾಪಸು ಬಂದು ಇಲ್ಲಿ ಏನು ಮಾಡುತ್ತಾನೆ ಎಂಬ ಸಣ್ಣ ಅನುಮಾನ ಇತ್ತು. ಅದಕ್ಕೆ ಅವರು ನಿನ್ನ ಎಲ್ಲ ಓದು ಮುಗಿದ ನಂತರ ಕೆಲವು ಕಾಲ ಅಲ್ಲಿಯೇ ಉದ್ಯೋಗದಲ್ಲಿ ಇದ್ದು, ಸ್ವಲ್ಪ ಹಣ ಮಾಡಿಕೊಂಡು ವಾಪಸು ಬಾ. ಆಗ ಇಲ್ಲಿ ನೆಮ್ಮದಿಯಿಂದ ಇರಬಹುದು' ಎಂದು ಹೇಳಿದ್ದರು.

'ಅಣ್ಣಯ್ಯನ ಓದೂ ಮುಗಿಯಿತು, ಕೆಲಸವೂ ಸಿಕ್ಕಿತು, ಅದೂ ದೊಡ್ಡಹುದ್ದೆಯ ಕೆಲಸ. ಕೆಲಸ ಸಿಕ್ಕ ನಂತರ ಮಗನಿಗೆ ಮದುವೆ ಮಾಡುವ ಯೋಚನೆ ಮಾಡಿದರು ಅಪ್ಪಯ್ಯ. ಇಲ್ಲಿನ ಹೆಣ್ಣನ್ನೇ ಮಗನಿಗೆ ತಂದುಕೊಂಡರು. ಅದಕ್ಕೆ ಅಣ್ಣಯ್ಯನೂ ಒಪ್ಪಿದ. ಅಣ್ಣಯ್ಯನ ಮದುವೆಯನ್ನೂ ಮಾಡಿ ಕೆಲವು ತಿಂಗಳು ಅಲ್ಲಿ ಇದ್ದು ಬನ್ನಿ' ಎಂದು ಹೇಳಿ ಕಳಿಸಿದರು. ತಿಂಗಳುಗಳು ಕಳೆದು, ವರ್ಷ ಕಳೆದು, ಎರಡು ತುಂಬಿದ ನಂತರ ಅಣ್ಣಯ್ಯನಿಗೆ ವಾಪಸು ಬರಲು ಒತ್ತಾಯಿಸಿದರು ಅಪ್ಪಯ್ಯ. ಆದರೆ, ಅತ್ತಿಗೆ ನಾನು ಅಮೆರಿಕಕ್ಕೆ ಬಂದು ಕೇವಲ ಒಂದೆರಡು ವರ್ಷಗಳಷ್ಟೇ ಆಗಿದೆ. ಇನ್ನೂ ಒಂದೆರಡು ವರ್ಷ ಇಲ್ಲಿಯೇ ಇರಲು ಇಷ್ಟ ಎಂದು ಹೇಳಿದರು. ಅದಕ್ಕೂ ಅಪ್ಪಯ್ಯ ಒಪ್ಪಿಗೆ ಸೂಚಿಸಿದರು. ಮತ್ತೆ ಒಂದೆರಡು ವರ್ಷ ಕಳೆಯಿತು. ಅಲ್ಲಿಯೇ ಮೊದಲ ಮಗಳೂ ಹುಟ್ಟಿದಳು, ಮೂರ್ನಾಲ್ಕು ವರ್ಷದವಳೂ ಆದಳು.

'ಆಗ ಅತ್ತಿಗೆ ಇಲ್ಲಿ ಮಕ್ಕಳ ಶಿಕ್ಷಣ (?) ಚೆನ್ನಾಗಿದೆ. ಮಗಳ ಶಿಕ್ಷಣವನ್ನು ಒಂದು ಹಂತದವರೆಗೆ ಇಲ್ಲಿಯೇ ಮುಗಿಸಿಕೊಂಡು ಹೋಗೋಣ ಎಂದು ಒತ್ತಾಯಿಸಿದರು. ಆಕೆ ಹೇಳುವುದರಲ್ಲಿಯೂ ತಥ್ಯವಿದೆ ಎಂದು ಭಾವಿಸಿದ ಅಣ್ಣಯ್ಯ ಹೆಂಡತಿಯ ಮಾತಿಗೆ ಒಪ್ಪಿಗೆ ಸೂಚಿಸಿದ. ಅವರ ಮಗಳನ್ನು ಅಲ್ಲಿಯೇ ಶಾಲೆಗೆ ಸೇರಿಸಿದರು'.

'ಒಮ್ಮೆ ರಜಾಕ್ಕೆಂದು ಇಲ್ಲಿಗೆ ಗಂಡ-ಹೆಂಡತಿ, ಮಗಳು ಎಲ್ಲ ಸೇರಿ ಬಂದಿದ್ದರು. ಇಲ್ಲಿಗೆ ಬರುವಾಗ ಅತ್ತಿಗೆ ಗರ್ಭ ಧರಿಸಿದ್ದಾರೆ ಎಂಬುದು ಗೊತ್ತಿರಲಿಲ್ಲ. ಇಲ್ಲಿಗೆ ಬಂದ ನಂತರ ನಾನು ಮುಟ್ಟಾಗದೇ ಒಂದೂವರೆ ತಿಂಗಳಾಗಿದೆ. ಏಕೋ ನನಗೆ ಅನುಮಾನ ಎಂದು ಹೇಳಿದರು ಅತ್ತಿಗೆ. ವೈದ್ಯರಲ್ಲಿ ತಪಾಸಣೆ ಮಾಡಿಸಿದಾಗ ಗರ್ಭಿಣಿ ಎಂಬುದು ಗೊತ್ತಾಯಿತು. ಅವರು ಬಂದಿದ್ದು, ಮಗಳ ಶಾಲೆಯ ರಜಾ ದಿನಕ್ಕೆಂದು. ಅದು ಮುಗಿಯುವ ದಿನಗಳು ಹತ್ತಿರ ಆಗಿದ್ದವು. ಮಗಳ ಓದೆಲ್ಲಿ ಕಳೆದುಹೋಗುತ್ತದೋ ಎಂಬ ಚಿಂತೆಯನ್ನು ಅತ್ತಿಗೆ ಮುಂದಿಟ್ಟರು. ಮಗು ಜನಿಸುವವರೆಗೆ ಇಲ್ಲಿಯೇ ಯಾವುದಾದರೂ ಒಳ್ಳೆಯ ಶಾಲೆಗೆ ಸೇರಿಸಿದರಾಯಿತು ಎಂಬ ಚರ್ಚೆ ಬಂದಾಗ ಅಲ್ಲಿನ ಸ್ಟ್ಯಾಂಡರ್ಡ್ ಇಲ್ಲಿ ಎಲ್ಲಿ ಬರಬೇಕು. ಇಲ್ಲಿನ ಶಾಲೆಯಲ್ಲಿ ಓದಿದರೆ ಮಗಳು ಕಲಿತಿದ್ದನ್ನೂ ಮರೆಯುತ್ತಾಳೆ. ನಾವು ವಾಪಸು ಹೋಗೋಣ' ಎಂದು ವರಾತ ಹಚ್ಚಿದಳು.



ಆಗ ಅಪ್ಪಯ್ಯ 'ಇಲ್ಲಿನ ಶಾಲೆಯಲ್ಲೇ ಓದಿದ ಮೋಕ್ಷಗುಂಡಂ ವಿಶ್ವೇಶ್ವರಯ್ಯ ಅವರು ಸರ್ ಎಂ. ವಿಶ್ವೇಶ್ವರಯ್ಯ